119

# ಕರ್ನಾಟಕ ಸರ್ಕಾರ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ ಕೋಶ)

ಸಂಖ್ಯೆ: ಸಿಆಸುಇ/183/ಆರ್‌ಟಿಐ/2010

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು-560 001, ದಿನಾಂಕ: 20-12-2010

## ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರಡಿ ಮಾಹಿತಿ ಕೋರುವವರು ನಿರ್ಭೀತಿಯಿಂದ ಮಾಹಿತಿ ಪಡೆಯುವ ಬಗ್ಗೆ.

ಉಲ್ಲೇಖ: ಕೇಂದ್ರದ ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಭೂವಿಜ್ಞಾನ ಸಚಿವರು ಮತ್ತು ಪ್ರಧಾನಿಯವರ ಕಛೇರಿಯಲ್ಲಿ ರಾಜ್ಯ ಸಚಿವರಾದ ಶ್ರೀ ಪೃಥ್ವೀರಾಜ ಚೌಹಾನ್, ಇವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿರುವ ಅ.ಸ.ಪತ್ರ ಸಂಖ್ಯೆ:F:1/15/2010-IR, ದಿನಾಂಕ:25-08-1020.

--------

ಮಾಹಿತಿ ಹಕ್ಕು ಅಧಿನಿಯಮ,2005 ಅನುಷ್ಠಾನಕ್ಕೆ ಬಂದು 5 ವರ್ಷಗಳಾಗಿವೆ. ಆಡಳಿತವನ್ನು ಪಾರದರ್ಶಕಗೊಳಿಸುವ ಹಾಗೂ ಸರ್ಕಾರಿ ನೌಕರರನ್ನು ಹೊಣೆಗಾರರನ್ನಾಗಿಸುವ ಉದ್ದೇಶದಿಂದ ಅಧಿನಿಯಮವನ್ನು ಜಾರಿಗೊಳಿಸಲಾಗಿದ್ದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಆಡಳಿತದಲ್ಲಿ ಭ್ರಷ್ಟಾಚಾರ ತಡೆಯುವಲ್ಲಿ ಗಣನೀಯ ಪರಿಣಾಮ ಬೀರಿದೆ. ಈ ಅಧಿನಿಯಮದಡಿ ಸಾಕಷ್ಟು ಮಾಹಿತಿ ಹಕ್ಕು ಅರ್ಜಿಗಳನ್ನು ದೇಶದ್ಯಾಂತ ಸಲ್ಲಿಸಿ ಮಾಹಿತಿ ಪಡೆಯಲಾಗುತ್ತಿದೆ. ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ಕೋರುವವರು ಆಡಳಿತದಲ್ಲಿ ನಡೆಯುವ ಭ್ರಷ್ಟಾಚಾರ ಮತ್ತು ಕೆಟ್ಟ ಆಡಳಿತವನ್ನು ಬಯಲು ಮಾಡಿದ್ದಾರೆ. ಇಂತಹ ಸಂದರ್ಭಗಳಲ್ಲಿ ಮಾಹಿತಿ ಕೋರುವವರ ಮೇಲೆ ಹಲ್ಲೆಯಾಗುತ್ತಿರುವುದು ಕಂಡುಬಂದಿದೆ. ಮಾಧ್ಯಮಗಳಲ್ಲಿ ಸಹ ಈ ವಿಷಯ ಕುರಿತು ವರದಿಯಾಗಿರುತ್ತದೆ. ಮಾಹಿತಿ ಕೋರುವವರ ಮೇಲೆ ಹಲ್ಲೆಯಾಗುವುದು, ಹೆದರಿಸುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಈ ಕುರಿತು ವಾಸ್ತವಾಂಶಗಳು ಸೂಕ್ತ ತನಿಖೆಯ ನಂತರವೇ ತಿಳಿಯಬಹುದಾಗಿದ್ದರೂ ಇವು ನಿಜವಾಗಿದ್ದಲ್ಲಿ, ಈ ವಿಷಯವು ಅತ್ಯಂತ ಗಂಭೀರ ವಿಷಯವಾಗಿದೆ ಇವುಗಳನ್ನು ಮುಂದುವರಿಯಲು ಬಿಡಬಾರದಾಗಿಯೂ ಹಾಗೂ ಇದು ಅಧಿನಿಯಮವನ್ನು ಜಾರಿಗೊಳಿಸಿದ ಉದ್ದೇಶವನ್ನೇ ನಿಷ್ಫಲಗೊಳಿಸುತ್ತದೆ ಎಂದು ಉಲ್ಲೇಖಿತ ಪತ್ರದಲ್ಲಿ ಕೇಂದ್ರದ ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಭೂವಿಜ್ಞಾನ ಸಚಿವರು ಮತ್ತು ಪ್ರಧಾನಿಯವರ ಕಛೇರಿಯಲ್ಲಿ ರಾಜ್ಯ ಸಚಿವರಾದ ಶ್ರೀ ಪೃಥ್ವೀರಾಜ್ ಚೌಹಾನ್ ಇವರು ತಿಳಿಸಿರುತ್ತಾರೆ.

...2/-

ಹಾಗೆಯೇ ಮಾಹಿತಿ ಹಕ್ಕು ಅಧಿನಿಯಮದ ಸಂಪೂರ್ಣ ಅನುಷ್ಠಾನಕ್ಕಾಗಿ ಹಾಗೂ ಮಾಹಿತಿ ಪಡೆಯುವವರು ನಿರ್ಭೀತಿಯಿಂದ ತಮ್ಮ ಹಕ್ಕನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಆಡಳಿತಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸಬೇಕಾಗಿದೆ ಹಾಗೂ ಮಾಹಿತಿ ಕೋರುವವರಿಗೆ ನಿರ್ಭೀತಿಯ ವಾತಾವರಣವನ್ನು ಸೃಷ್ಟಿಸಬೇಕಾಗಿದೆ ಎಂದೂ ಅವರು ತಿಳಿಸಿರುತ್ತಾರೆ. ಈ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾಡಳಿತಗಳು ತೀಕ್ಷ್ಣವಾದ ಕ್ರಮ ಕೈಗೊಳ್ಳ ಬೇಕಾಗಿದೆ. ರಾಜ್ಯ ಮಟ್ಟದಲ್ಲಿ ಇಂತಹ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಲ್ಲಿ, ಸರಿಯಾದ ವಿಚಾರಣೆ ನಡೆಸಿ, ಆರೋಪಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ. ಕೆಲವು ರಾಜ್ಯಗಳು ಈಗಾಗಲೆ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡಿದ್ದು, ಕರ್ನಾಟಕದಲ್ಲೂ ಮಾಹಿತಿ ಕೋರುವವರು ನಿರ್ಭೀತಿಯಿಂದ ಮತ್ತು ಸರಾಗವಾಗಿ ಮಾಹಿತಿ ಪಡೆಯಲು ಒಳ್ಳೆಯ ವಾತಾವರಣವನ್ನು ಸೃಷ್ಟಿಸುವಂತೆ ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ/ಇಲಾಖಾ ಮುಖ್ಯಸ್ಥರ / ನಿಗಮ / ಮಂಡಳಿ / ಅನುಧಾನಿತ ಸಂಘ-ಸಂಸ್ಥೆಗಳು ಹಾಗೂ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ /ಮೊದಲ ಮೇಲ್ಮನವಿ ಪ್ರಾಧಿಕಾರಗಳಿಗೆ ಸೂಚಿಸುವಂತೆ ಈ ಮೂಲಕ ತಿಳಿಸಲಾಗಿದೆ.

Senapati 24/12
(ತಪನ್ ಸೇನಾಪತಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ - ಮಾಹಿತಿ ಹಕ್ಕು)

ಇವರಿಗೆ:

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು,

ಪ್ರತಿಯನ್ನು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5) ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.